06/1

# 2008

## COMMERCE AND ACCOUNTANCY

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) What is zero-base budgeting ?

   (b) What do you mean by responsibility accounting ?

   (c) Define optimum capital structure.

   (d) Distinguish between tax avoidance and tax evasion.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಶೂನ್ಯಾಧಾರಿತ ಆಯವ್ಯಯ (ಬಜೆಟಿಂಗ್) ಎಂದರೇನು ?

   (ಬಿ) ಜವಾಬ್ದಾರಿಕೆಯ ಲೆಕ್ಕ ಪಾಲನೆ ಎಂದರೇನು ?

   (ಸಿ) ಅನುಕೂಲತಮ ಬಂಡವಾಳ ರಚನೆ ಎಂದರೇನು ವಿವರಿಸಿ.

   (ಡಿ) ತೆರಿಗೆ ಕಡಿಮೆಯಾಗುವಂತೆ ಮಾಡುವುದು ಮತ್ತು ತೆರಿಗೆ ತಪ್ಪಿಸುವುದು ಇವೆರಡರ ವ್ಯತ್ಯಾಸ ತಿಳಿಸಿ.

## PART B

*10×10=100*

*Answer each question in about 100 words. Each question carries 10 marks.*

2. What are the different methods of segregating semi-variable or mixed costs ?

3. Distinguish between capital expenditure and revenue expenditure for the purpose of verification of assets and liabilities by an auditor.

4. Explain the sources and uses of working capital for preparing the statement of changes in financial position of a firm.

5. Explain the merits and demerits of internal rate of return (IRR) as a discounted cash flow technique of capital budgeting decisions.

6. Discuss the key assumptions, contributions and criticisms of Walter's Model of dividend relevance.

7. The following is a summary of receipts and issues of materials in a factory during January, current year :

| | |
|---|---|
| January 1 | Opening balance, 500 units @ Rs. 25 per unit |
| 3 | Issue, 70 units |
| 4 | Issue, 100 units |
| 8 | Issue, 80 units |
| 13 | Received from supplier, 200 units @ Rs. 24·50 per unit |
| 14 | Returned to store, 15 units @ Rs. 24 per unit |
| 16 | Issue, 180 units |
| 20 | Received from supplier, 240 units @ Rs. 24·75 per unit |
| 24 | Issue, 304 units |
| 25 | Received from supplier, 320 units @ Rs. 24·50 per unit |
| 26 | Issue, 112 units |
| 27 | Returned to store, 12 units @ Rs. 24·50 per unit |
| 31 | Received from supplier, 100 units @ Rs. 25 per unit |

Work out on the basis of First-in-First-out (FIFO) price at which materials are to be issued and the value of stock as on January 31. The physical verification revealed that on January, 15 there was a shortage of 5 units and another of 8 units on January 28.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಅರೆ ವ್ಯತ್ಯಾಸೀಯ ಅಥವಾ ಮಿಶ್ರ ವೆಚ್ಚಗಳನ್ನು ಪ್ರತ್ಯೇಕಿಸುವ ವಿವಿಧ ವಿಧಾನಗಳನ್ನು ತಿಳಿಸಿ.

**3.** ಲೆಕ್ಕಪರಿಶೋಧಕರು ಸ್ವತ್ತುಗಳು ಮತ್ತು ಹೊಣೆಗಾರಿಕೆಗಳನ್ನು ತಾಳೆನೋಡುವ ಉದ್ದೇಶಕ್ಕಾಗಿ ಬಂಡವಾಳ ವೆಚ್ಚಗಳು ಹಾಗೂ ರೆವಿನ್ಯೂ ವೆಚ್ಚಗಳ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.

**4.** ಒಂದು ಉದ್ದಿಮೆಯ ಹಣಕಾಸು ಸ್ಥಿತಿಯಲ್ಲಿ ವ್ಯತ್ಯಾಸಗಳ ವಿವರಣ ಪತ್ರವನ್ನು ಸಿದ್ಧಪಡಿಸುವುದಕ್ಕಾಗಿ ಕಾರ್ಯ ಬಂಡವಾಳದ ಮೂಲ ಹಾಗೂ ಉಪಯೋಗಗಳನ್ನು ವಿವರಿಸಿ.

**5.** ಬಂಡವಾಳ ಬಜೆಟಿಂಗ್ ನಿರ್ಣಯಗಳ ಇಳುವರಿ ಮಾಡಿದ ನಗದು ಹರಿವಿನ ತಂತ್ರವಾಗಿ ಆಂತರಿಕ ಉತ್ಪತ್ತಿದರದ (IRR) ಗುಣ ಮತ್ತು ದೋಷಗಳನ್ನು ವಿವರಿಸಿ.

**6.** ಲಾಭಾಂಶ ಪ್ರಸ್ತುತತೆಗೆ ಸಂಬಂಧಿಸಿದ ವಾಲ್ಟರ್‌ನ ಮಾದರಿಯ ಮುಖ್ಯಗ್ರಹಿಕೆಗಳು, ಕೊಡುಗೆಗಳು ಮತ್ತು ಟೀಕೆಗಳ ಬಗ್ಗೆ ಚರ್ಚಿಸಿ.

**7.** ಒಂದು ಕಾರ್ಖಾನೆಯಲ್ಲಿ ಪ್ರಸ್ತುತ ವರ್ಷದ ಜನವರಿ ತಿಂಗಳಿಗೆ ಸಂಬಂಧಿಸಿದ ಸಾಮಗ್ರಿಗಳ ಸ್ವೀಕೃತಿ ಮತ್ತು ನೀಡಿಕೆಗಳ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ :

| | |
|---|---|
| ಜನವರಿ 1 | ಪ್ರಾರಂಭದ ಶಿಲ್ಕು, 500 ಘಟಕಗಳು, ಪ್ರತಿ ಘಟಕಕ್ಕೆ 25 ರೂ. ಗಳಂತೆ |
| 3 | ನೀಡಿಕೆ, 70 ಘಟಕಗಳು |
| 4 | ನೀಡಿಕೆ, 100 ಘಟಕಗಳು |
| 8 | ನೀಡಿಕೆ, 80 ಘಟಕಗಳು |
| 13 | ಸರಬರಾಜುದಾರರಿಂದ ಸ್ವೀಕರಿಸಿದ್ದು, 200 ಘಟಕಗಳು, ಪ್ರತಿಘಟಕಕ್ಕೆ 24·50 ರೂ. ಗಳಂತೆ |
| 14 | ಉಗ್ರಾಣಕ್ಕೆ ಹಿಂದಿರುಗಿಸಿದ್ದು, 15 ಘಟಕಗಳು, ಪ್ರತಿಘಟಕಕ್ಕೆ 24 ರೂ. ಗಳಂತೆ |
| 16 | ನೀಡಿಕೆ, 180 ಘಟಕಗಳು |
| 20 | ಸರಬರಾಜುದಾರರಿಂದ ಸ್ವೀಕರಿಸಿದ್ದು, 240 ಘಟಕಗಳು, ಪ್ರತಿಘಟಕಕ್ಕೆ 24·75 ರೂ. ಗಳಂತೆ |
| 24 | ನೀಡಿಕೆ, 304 ಘಟಕಗಳು |
| 25 | ಸರಬರಾಜುದಾರರಿಂದ ಸ್ವೀಕರಿಸಿದ್ದು, 320 ಘಟಕಗಳು ಪ್ರತಿಘಟಕಕ್ಕೆ 2[illegible]·50 ರೂ. ಗಳಂತೆ |
| 26 | ನೀಡಿಕೆ, 112 ಘಟಕಗಳು |
| 27 | ಉಗ್ರಾಣಕ್ಕೆ ಹಿಂದಿರುಗಿಸಿದ್ದು, 12 ಘಟಕಗಳು, ಪ್ರತಿಘಟಕಕ್ಕೆ 24·50 ರೂ. ಗಳಂತೆ |
| 31 | ಸರಬರಾಜುದಾರರಿಂದ ಸ್ವೀಕರಿಸಿದ್ದು, 100 ಘಟಕಗಳು ಪ್ರತಿಘಟಕಕ್ಕೆ 25 ರೂ. ಗಳಂತೆ |

ಮೊದಲು ಬಂದದ್ದು ಮೊದಲುಹೊರಗೆ (FIFO) ಎಂಬ ಆಧಾರದ ಮೇಲೆ ಯಾವ ಬೆಲೆಯಲ್ಲಿ ಸಾಮಗ್ರಿಗಳನ್ನು ನೀಡಬೇಕು ಎಂಬುದನ್ನು ಹಾಗೂ ಜನವರಿ 31 ರಂದು ಇರುವಂತೆ ದಾಸ್ತಾನಿನ ಮೌಲ್ಯವನ್ನು ಲೆಕ್ಕಹಾಕಿ. ಭೌತಿಕ ತಪಾಸಣೆ ನಡೆಸಿದಾಗ ಜನವರಿ 15 ರಂದು 5 ಘಟಕಗಳು ಕಡಿಮೆ ಇರುವುದು ಮತ್ತು ಜನವರಿ 28 ರಂದು 8 ಘಟಕಗಳು ಕಡಿಮೆ ಇರುವುದು ಕಂಡುಬಂದಿದೆ.

**8.** A company is considering an investment proposal to instal new milling controls at a cost of Rs. 50,000. The facility has a life expectancy of 5 years and no salvage value. The tax rate is 35 per cent. Assume the firm uses straight line depreciation and the same is allowed for tax purposes. The estimated cash flows before depreciation and tax (CFBT) from the investment proposal are as follows :

| Year | CFBT (Rs.) | Present value of Re. 1 at 10% |
|---|---|---|
| 1 | 10,000 | 0·909 |
| 2 | 10,692 | 0·826 |
| 3 | 12,769 | 0·751 |
| 4 | 13,462 | 0·683 |
| 5 | 20,385 | 0·621 |

Compute the following :

(a) Pay back period

(b) Average Rate of Return

(c) Net present value at 10% discount rate

**9.** Calculate price, usage and mix variances from the following data :

| Material | Standard | | | Actual | | |
|---|---|---|---|---|---|---|
| | Quantity (kgs) | Price (Rs.) | Total (Rs.) | Quantity (kgs) | Price (Rs.) | Total (Rs.) |
| A | 4 | 1 | 4 | 2 | 3·50 | 7 |
| B | 2 | 2 | 4 | 1 | 2·00 | 2 |
| C | 2 | 4 | 8 | 3 | 3·00 | 9 |

8. ಒಂದು ಕಂಪನಿಯು 50,000 ರೂ. ವೆಚ್ಚದಲ್ಲಿ ಹೊಸ ಗಿರಣಿ ನಿಯಂತ್ರಣಗಳನ್ನು ಸ್ಥಾಪಿಸುವ ಹೂಡಿಕೆ ಪ್ರಸ್ತಾಪವನ್ನು ಪರಿಶೀಲಿಸುತ್ತದೆ. ಈ ಸೌಲಭ್ಯವು 5 ವರ್ಷಗಳ ಆಯುರ್ಮಾನ ಹೊಂದಿರುತ್ತದೆ ಮತ್ತು ಇದಕ್ಕೆ ಸಂರಕ್ಷಣಾ ಮೌಲ್ಯ (Salvage value) ಇರುವುದಿಲ್ಲ. ತೆರಿಗೆಯ ದರ ಶೇಕಡಾ 35 ಆಗಿದೆ. ಈ ಉದ್ಯಮವು ಸರಳರೇಖಾ ಸವಕಳಿಯನ್ನು ಬಳಸುತ್ತಿದೆ ಮತ್ತು ತೆರಿಗೆಯ ಉದ್ದೇಶಗಳಿಗೂ ಇದಕ್ಕೇ ಅವಕಾಶ ಮಾಡಿಕೊಡಲಾಗಿದೆ ಎಂದು ಭಾವಿಸಿಕೊಳ್ಳಿ. ಈ ಹೂಡಿಕೆ ಪ್ರಸ್ತಾವನೆಯಿಂದ ಸವಕಳಿ ಹಾಗೂ ತೆರಿಗೆಗೆ ಮೊದಲು (CFBT) ಅಂದಾಜು ಮಾಡಲಾದ ನಗದು ಹರಿವು ಕೆಳಕಂಡಂತಿದೆ :

| ವರ್ಷ | CFBT (ರೂ.) | 10% ನಲ್ಲಿ 1 ರೂ. ನ ಪ್ರಸ್ತುತ ಮೌಲ್ಯ |
|---|---|---|
| 1 | 10,000 | 0·909 |
| 2 | 10,692 | 0·826 |
| 3 | 12,769 | 0·751 |
| 4 | 13,462 | 0·683 |
| 5 | 20,385 | 0·621 |

ಕೆಳಗಿನವುಗಳ ಲೆಕ್ಕ ಹಾಕಿ :

(a) ಸಂದಾಯ ಮರುಪಾವತಿಯ ಅವಧಿ

(b) ಪ್ರತಿಫಲದ ಸರಾಸರಿ ದರ

(c) 10% ರಿಯಾಯಿತಿ ದರದಲ್ಲಿ ನಿವ್ವಳ ಪ್ರಸಕ್ತಮೌಲ್ಯ

9. ಕೆಳಕಂಡ ದತ್ತಾಂಶದಿಂದ ಬೆಲೆ, ಬಳಕೆ ಹಾಗೂ ಮಿಶ್ರ ವ್ಯತ್ಯಾಸೀಯತೆಗಳನ್ನು ಎಣಿಕೆ ಹಾಕಿ :

| ಸಾಮಗ್ರಿ | ಪ್ರಮಾಣಕ | | | ವಾಸ್ತವ | | |
|---|---|---|---|---|---|---|
| | ಪರಿಮಾಣ (ಕೆಜಿ) | ಬೆಲೆ (ರೂ.) | ಒಟ್ಟು (ರೂ.) | ಪರಿಮಾಣ (ಕೆಜಿ) | ಬೆಲೆ (ರೂ.) | ಒಟ್ಟು (ರೂ.) |
| A | 4 | 1 | 4 | 2 | 3·50 | 7 |
| B | 2 | 2 | 4 | 1 | 2·00 | 2 |
| C | 2 | 4 | 8 | 3 | 3·00 | 9 |

**10.** From the following prepare a reconciliation statement :

| | Rs. |
|---|---|
| Net profits as per financial records | 1,28,755 |
| Net profit as per costing records | 1,72,400 |
| Works overhead under-recovered in costing records | 3,120 |
| Administrative overhead recovered in excess in cost records | 1,700 |
| Depreciation charged in financial records | 11,200 |
| Depreciation recovered in costing records | 12,500 |
| Interest received but not included in costing records | 8,000 |
| Obsolescence loss charged in financial records | 5,700 |
| Income tax provided in financial books | 40,300 |
| Bank interest credited in financial books | 750 |
| Stores adjustments (credited in financial books) | 475 |
| Depreciation of stock charged in financial books | 6,750 |

**11.** From the following information, find out the net income and tax liability of X (28 years), a resident individual, for the assessment year 2008 - 09 :

| | Rs. |
|---|---|
| Salary | 1,69,000 |
| Business income | (–) 32,000 |
| Capital gain : | |
| Long-term | 50,000 |
| Short-term | 16,000 |
| Winning from horse races (gross) | 35,000 |
| Total | 2,38,000 |

10. ಕೆಳಕಂಡ ಅಂಶಗಳಿಂದ ಒಂದು ಮರುಹೊಂದಾಣಿಕೆ ವಿವರಣ ಪಟ್ಟಿಯನ್ನು ಸಿದ್ಧಪಡಿಸಿ :

| | ರೂ. |
|---|---|
| ಹಣಕಾಸಿನ ದಾಖಲೆಗಳ ಪ್ರಕಾರ ನಿವ್ವಳ ಲಾಭಗಳು | 1,28,755 |
| ವೆಚ್ಚನಿರ್ಣಯ ದಾಖಲೆಗಳ ಪ್ರಕಾರ ನಿವ್ವಳ ಲಾಭ | 1,72,400 |
| ವೆಚ್ಚ ದಾಖಲೆಗಳಲ್ಲಿ ಕಡಿಮೆ ವಸೂಲಾದ ಕಾರ್ಯ ಮೇಲ್ವೆಚ್ಚಗಳು | 3,120 |
| ವೆಚ್ಚ ದಾಖಲೆಗಳಲ್ಲಿ ಹೆಚ್ಚುವರಿ ವಸೂಲಾದ ಆಡಳಿತಾತ್ಮಕ ಮೇಲ್ವೆಚ್ಚಗಳು | 1,700 |
| ಹಣಕಾಸಿನ ದಾಖಲೆಗಳಲ್ಲಿ ವಿಧಿಸಲಾದ ಸವಕಳಿ | 11,200 |
| ವೆಚ್ಚನಿರ್ಣಯ ದಾಖಲೆಗಳಲ್ಲಿ ವಸೂಲಾದ ಸವಕಳಿ | 12,500 |
| ಸ್ವೀಕೃತವಾದ ಆದರೆ ವೆಚ್ಚ ನಿರ್ಣಯ ದಾಖಲೆಗಳಲ್ಲಿ ಸೇರ್ಪಡೆಯಾಗದ ಬಡ್ಡಿ | 8,000 |
| ಹಣಕಾಸಿನ ದಾಖಲೆಗಳಲ್ಲಿ ವಿಧಿಸಲಾದ ಬಳಕೆತಪ್ಪಿದ ನಷ್ಟ | 5,700 |
| ಹಣಕಾಸು ಪುಸ್ತಕಗಳಲ್ಲಿ ಒದಗಿಸಲಾದ ಆದಾಯ ತೆರಿಗೆ | 40,300 |
| ಹಣಕಾಸು ಪುಸ್ತಕಗಳಲ್ಲಿ ಜಮೆಯಾದ ಬ್ಯಾಂಕ್ ಬಡ್ಡಿ | 750 |
| ಉಗ್ರಾಣ ಹೊಂದಾಣಿಕೆಗಳು (ಹಣಕಾಸು ಪುಸ್ತಕಗಳಲ್ಲಿ ಜಮೆಯಾದ) | 475 |
| ಹಣಕಾಸಿನ ಪುಸ್ತಕಗಳಲ್ಲಿ ವಿಧಿಸಲಾದ ದಾಸ್ತಾನಿನ ಸವಕಳಿ | 6,750 |

11. ಕೆಳಕಂಡ ಮಾಹಿತಿಯಿಂದ ದೇಶವಾಸಿ ವ್ಯಕ್ತಿ X (28 ವರ್ಷಗಳು) ಎಂಬುವವರ ನಿವ್ವಳ ಆದಾಯ ಹಾಗೂ ತೆರಿಗೆ ಹೊಣೆಗಾರಿಕೆಯನ್ನು 2008 – 09 ನಿರ್ಧಾರಣ ವರ್ಷಕ್ಕೆ, ಕಂಡುಹಿಡಿಯಿರಿ :

| | ರೂ. |
|---|---|
| ವೇತನ | 1,69,000 |
| ವ್ಯವಹಾರದ ಆದಾಯ | (–) 32,000 |
| ಬಂಡವಾಳ ಲಾಭ : | |
| ದೀರ್ಘಾವಧಿ | 50,000 |
| ಅಲ್ಪಾವಧಿ | 16,000 |
| ಕುದುರೆ ಜೂಜಿನಿಂದ ಗೆದ್ದಹಣ (ಸ್ಥೂಲ) | 35,000 |
| ಒಟ್ಟು | 2,38,000 |

| | Rs. |
|---|---|
| Mediclaim insurance on his own health | 250 |
| Contribution towards pension fund of LIC | 750 |
| Expenditure on medical treatment of a dependent relative (being a person with disability) | 10,000 |
| Deposit for maintenance of dependent relative (being a person with disability) | 25,000 |
| Donation to the Govt. of India for family planning | 40,000 |
| Donation to the Central Welfare Fund of Army (Indian) | 4,000 |
| Life insurance premium on the life of Mrs. X | 1,000 |

| | ರೂ. |
|---|---|
| ಸ್ವಂತ ಆರೋಗ್ಯಕ್ಕಾಗಿ ಮಾಡಿಸಿದ ಮೇಡಿಕ್ಲೇಮ್ ವಿಮೆ | 250 |
| ಎಲ್.ಐ.ಸಿ. ಪಿಂಚಣಿ ನಿಧಿಗಾಗಿ ಕೊಡುಗೆ | 750 |
| ಅವಲಂಬಿತ ಬಂಧು (ಅಂಗವಿಕಲತೆ ಹೊಂದಿರುವವರು) ವಿನ ವೈದ್ಯಕೀಯ ಚಿಕಿತ್ಸೆಗಾಗಿ ಮಾಡಿದ ವೆಚ್ಚ | 10,000 |
| ಅವಲಂಬಿತ ಬಂಧುವಿನ (ಅಂಗವಿಕಲತೆ ಹೊಂದಿರುವ ವ್ಯಕ್ತಿ) ನಿರ್ವಹಣೆಗಾಗಿ ಮಾಡಿದ ಠೇವಣಿ | 25,000 |
| ಕುಟುಂಬ ಯೋಜನೆಗಾಗಿ ಭಾರತ ಸರ್ಕಾರಕ್ಕೆ ದೇಣಿಗೆ | 40,000 |
| ಕೇಂದ್ರೀಯ ಸೇನಾ (ಭಾರತೀಯ) ಕಲ್ಯಾಣ ನಿಧಿಗೆ ದೇಣಿಗೆ | 4,000 |
| ಶ್ರೀಮತಿ X ಅವರಿಗಾಗಿ ಜೀವ ವಿಮಾ ಕಂತು | 1,000 |

[Turn over

## PART C

*6×15=90*

*Answer each question in about 150 words. Each question carries 15 marks.*

**12.** What are the basic elements of an auditor's report ? Explain the duties and responsibilities of an auditor.

**13.** Explain the major recommendations of Tandon Committee and Chore Committee on bank credit.

**14.** The balance sheets of ABC Ltd. as on 31st March, year 1 and year 2 are given below :

| | 31st March | |
|---|---|---|
| | Year 1 (Rs.) | Year 2 (Rs.) |
| Share capital | 6,00,000 | 8,00,000 |
| Capital reserve | – | 20,000 |
| General reserve | 3,40,000 | 4,00,000 |
| P & L Account | 1,20,000 | 1,50,000 |
| Debentures | 4,00,000 | 2,80,000 |
| Creditors | 2,40,000 | 2,60,000 |
| Provision for income tax | 1,80,000 | 1,70,000 |
| Proposed dividend | 60,000 | 72,000 |
| Unpaid dividend | – | 8,000 |
| | 19,40,000 | 21,60,000 |
| Fixed costs (at cost) | 16,00,000 | 19,00,000 |
| Less : Depreciation | (4,60,000) | (5,80,000) |
| | 11,40,000 | 13,20,000 |
| Trade investments | 2,00,000 | 1,60,000 |
| Current assets | 5,60,000 | 6,60,000 |
| Preliminary expenses | 40,000 | 20,000 |
| | 19,40,000 | 21,60,000 |

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಲೆಕ್ಕ ಪರಿಶೋಧಕರ ವರದಿಯ ಮೂಲಘಟಕಗಳು (Basic Elements) ಯಾವುವು ? ಲೆಕ್ಕಪರಿಶೋಧಕರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಿ.

**13.** ಬ್ಯಾಂಕಿನ ಸಾಲಕ್ಕೆ ಸಂಬಂಧಿಸಿದಂತೆ ಟಂಡನ್ ಸಮಿತಿ ಹಾಗೂ ಚೋರ್ ಸಮಿತಿ ನೀಡಿದ ಪ್ರಮುಖ ಶಿಫಾರಸುಗಳನ್ನು ವಿವರಿಸಿ.

**14.** ವರ್ಷ 1 ಮತ್ತು ವರ್ಷ 2 ರ ಮಾರ್ಚ 31 ರಲ್ಲಿದ್ದಂತೆ ABC ಲಿಮಿಟೆಡ್‌ನ ಸಂತುಲನ ಪಟ್ಟಿಗಳನ್ನು ಕೆಳಗೆ ಕೊಡಲಾಗಿದೆ :

| | 31 ರ ಮಾರ್ಚ್ | |
|---|---|---|
| | ವರ್ಷ 1 (ರೂ.) | ವರ್ಷ 2 (ರೂ.) |
| ಶೇರು ಬಂಡವಾಳ | 6,00,000 | 8,00,000 |
| ಬಂಡವಾಳ ಮೀಸಲು | – | 20,000 |
| ಸಾಮಾನ್ಯ ಮೀಸಲು | 3,40,000 | 4,00,000 |
| ಲಾಭ ಮತ್ತು ನಷ್ಟದ ಲೆಕ್ಕ | 1,20,000 | 1,50,000 |
| ಡಿಬೆಂಚರ್‌ಗಳು | 4,00,000 | 2,80,000 |
| ಲೆಕ್ಕಪರಿಶೋಧಕರ ಶುಲ್ಕ | 2,40,000 | 2,60,000 |
| ಆದಾಯ ತೆರಿಗೆಗೆ ಅವಕಾಶ | 1,80,000 | 1,70,000 |
| ಪ್ರಸ್ತಾವಿತ ಲಾಭಾಂಶ | 60,000 | 72,000 |
| ಸಂದಾಯ ಮಾಡದ ಲಾಭಾಂಶ | – | 8,000 |
| | 19,40,000 | 21,60,000 |
| ನಿಶ್ಚಿತ ವೆಚ್ಚಗಳು (ವೆಚ್ಚದಲ್ಲಿ ರೂ.) | 16,00,000 | 19,00,000 |
| ಕಳೆಯಿರಿ : ಸವಕಳಿ | (4,60,000) | (5,80,000) |
| | 11,40,000 | 13,20,000 |
| ವ್ಯಾಪಾರ ಹೂಡಿಕೆಗಳು | 2,00,000 | 1,60,000 |
| ಚಾಲ್ತಿ ಸ್ವತ್ತುಗಳು | 5,60,000 | 6,60,000 |
| ಪ್ರಾಥಮಿಕ ವೆಚ್ಚಗಳು | 40,000 | 20,000 |
| | 19,40,000 | 21,60,000 |

During the year 2, the company :

(i) Sold one machine for Rs. 50,000 the cost of which was Rs. 1,00,000 and depreciation provided on it was Rs. 40,000.

(ii) Provided Rs. 1,80,000 as depreciation.

(iii) Redeemed 30 per cent of debentures @ Rs. 105.

(iv) Sold some trade investments at a profit of Rs. 20,000, which was credited to capital reserve.

(v) Decided to value stock at cost, whereas previously the practice was to value stock at cost less 10 per cent. The stock according to books on 31st March (year 1) was Rs. 1,08,000. The stock on 31st March (year 2) was correctly valued at Rs. 1,50,000.

(vi) Decided to write off fixed assets costing Rs. 28,000 on which depreciation amounting to Rs. 20,000 has been provided.

You are required to prepare the statement of sources and application of funds during year 2, showing the changes in working capital.

**15.** Two businesses, AB Ltd. and CD Ltd., sell the same type of product in the same type of market. Their budgeted P & L accounts for the current year ending March 31, are as follows :

| | | AB Ltd. (Rs.) | | CD Ltd. (Rs.) |
|---|---|---|---|---|
| Sales | | 1,50,000 | | 1,50,000 |
| Less : Variable costs | 1,20,000 | | 1,00,000 | |
| Fixed costs | 15,000 | 1,35,000 | 35,000 | 1,35,000 |
| Net budgeted profit | | 15,000 | | 15,000 |

You are required to :

(a) calculate the break-even points of each business.

(b) state which business is likely to earn greater profits in conditions of (i) heavy demand for the product, (ii) low demand for the product.

2 ನೇ ವರ್ಷದ ಅವಧಿಯಲ್ಲಿ ಕಂಪನಿಯು :

(i) 1,00,000 ರೂ. ವೆಚ್ಚದ ಯಂತ್ರವೊಂದನ್ನು 50,000 ರೂ. ಗಳಿಗೆ ಮಾರಾಟ ಮಾಡಿತು ಮತ್ತು ಇದಕ್ಕೆ ಒದಗಿಸಿದ ಸವಕಳಿ 40,000 ರೂ. ಗಳಾಗಿದ್ದಿತು.

(ii) 1,80,000 ರೂ. ಗಳನ್ನು ಸವಕಳಿಗೆ ಒದಗಿಸಿತು.

(iii) ಶೇಕಡಾ 30 ರಷ್ಟು ಡಿಬೆಂಚರಗಳನ್ನು 105 ರೂ. ಗಳ ಪ್ರಕಾರ ಬಿಡಿಸಿಕೊಂಡಿತು.

(iv) ಕೆಲವು ವ್ಯಾಪಾರ ಹೂಡಿಕೆಗಳನ್ನು 20,000 ರೂ.ಗಳ ಲಾಭಕ್ಕೆ ಮಾರಾಟಮಾಡಿತು. ಇದನ್ನು ಬಂಡವಾಳ ಮೀಸಲಿಗೆ ಜಮೆ ಮಾಡಿತು.

(v) ದಾಸ್ತಾನು ಮೌಲ್ಯವನ್ನು ವೆಚ್ಚ ಪ್ರಕಾರ ಲೆಕ್ಕಹಾಕಲು ನಿರ್ಧರಿಸಿತು. ಆದರೆ, ಈ ಹಿಂದೆ ದಾಸ್ತಾನಿನ ಮೌಲ್ಯವನ್ನು ಶೇಕಡಾ 10 ರಷ್ಟು ಕಡಿಮೆ ವೆಚ್ಚದ ಪ್ರಕಾರ ಲೆಕ್ಕಹಾಕಲಾಗುತ್ತಿತ್ತು. ಮಾರ್ಚ್ 31 ರಂದು ಇದ್ದಂತೆ (ವರ್ಷ 1) ಪುಸ್ತಕಗಳ ಪ್ರಕಾರ 1,08,000 ರೂ. ಗಳ ದಾಸ್ತಾನು ಇದ್ದಿತು. ಮಾರ್ಚ್ 31 ರಂದು (ವರ್ಷ 2) ಇರುವಂತೆ ದಾಸ್ತಾನಿನ ಮೌಲ್ಯವನ್ನು 1,50,000 ರೂ. ಗಳೆಂದು ಸರಿಯಾಗಿಯೇ ಲೆಕ್ಕಮಾಡಲಾಗಿತ್ತು.

(vi) 28,000 ರೂ. ವೆಚ್ಚದ ಸ್ಥಿರ ಸ್ವತ್ತುಗಳನ್ನು ಮನ್ನಾ ಮಾಡಲು ನಿರ್ಧರಿಸಿತು. ಇದಕ್ಕೆ 20,000 ರೂ. ಗಳಷ್ಟು ಸವಕಳಿಯನ್ನು ಒದಗಿಸಲಾಗಿದೆ.

ವರ್ಷ 2 ರ ಅವಧಿಯ ಮೂಲಗಳ ವಿವರಣ ಪಟ್ಟಿ ಹಾಗೂ ನಿಧಿಗಳ ಬಳಕೆಯ ವಿವರಣ ಪಟ್ಟಿಯನ್ನು ನೀವು ಸಿದ್ಧಪಡಿಸಬೇಕು. ಕಾರ್ಯ ಬಂಡವಾಳದಲ್ಲಿನ ಬದಲಾವಣೆಯನ್ನು ತೋರಿಸಿ ಈ ಪಟ್ಟಿ ಸಿದ್ಧ ಪಡಿಸಬೇಕು.

**15.** AB ಲಿಮಿಟೆಡ್ ಮತ್ತು CD ಲಿಮಿಟೆಡ್ ಗಳೆಂಬ ಎರಡು ವ್ಯಾಪಾರೋದ್ಯಮಗಳು ಒಂದೇ ವಿಧವಾದ ಉತ್ಪನ್ನವನ್ನು ಒಂದೇ ವಿಧದ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿವೆ. ಮಾರ್ಚ್ 31 ಕ್ಕೆ ಕೊನೆ ಯಾಗುವ ಚಾಲ್ತಿ ವರ್ಷದಲ್ಲಿ ಅವುಗಳ ಆಯವ್ಯಯ ಅಂದಾಜು ಪತ್ರದ ಲಾಭ ಮತ್ತು ನಷ್ಟದ ಲೆಕ್ಕಗಳು ಕೆಳಕಂಡಂತಿವೆ :

| | | AB ಲಿಮಿಟೆಡ್ (ರೂ.) | | CD ಲಿಮಿಟೆಡ್ (ರೂ.) |
|---|---|---|---|---|
| ಮಾರಾಟಗಳು | | 1,50,000 | | 1,50,000 |
| ಕಳೆಯಿರಿ : ವ್ಯತ್ಯಾಸಿ ವೆಚ್ಚಗಳು | 1,20,000 | | 1,00,000 | |
| ನಿಶ್ಚಿತ ವೆಚ್ಚಗಳು | 15,000 | 1,35,000 | 35,000 | 1,35,000 |
| ನಿವ್ವಳ ಅಂದಾಜುಪತ್ರದ ಲಾಭ | | 15,000 | | 15,000 |

ನೀವು ಕೆಳಕಂಡವುಗಳ ಲೆಕ್ಕ ಮಾಡಬೇಕು :

(ಎ) ಇವೆರಡೂ ವ್ಯಾಪಾರೋದ್ಯಮಗಳ ಲಾಭನಷ್ಟ ರಹಿತ ಬಿಂದುಗಳನ್ನು ಲೆಕ್ಕಮಾಡಿ.

(ಬಿ) (i) ಉತ್ಪನ್ನಕ್ಕೆ ಭಾರೀ ಬೇಡಿಕೆ (ii) ಉತ್ಪನ್ನಕ್ಕೆ ಕಡಿಮೆ ಬೇಡಿಕೆ ಇರುವ ಸ್ಥಿತಿಗಳಲ್ಲಿ ಯಾವ ವ್ಯಾಪಾರೋದ್ಯಮವು ಹೆಚ್ಚಿನ ಲಾಭಗಳನ್ನು ಗಳಿಸುವ ಸಾಧ್ಯತೆ ಇದೆ ?

[Turn over

**16.** The balance sheet of A Ltd. as on 1st January 2008 and the income statement for the year ending 31st December 2008 are set out below :

**Balance Sheet**

**as at 1st January 2008**

| | *Rs.* | | *Rs.* |
|---|---|---|---|
| Share capital | 10,000 | New machine | 15,000 |
| 10% Debentures | 6,000 | Stock | 2,400 |
| Creditors | 3,600 | Debtors | 1,200 |
| | | Cash | 1,000 |
| | 19,600 | | 19,600 |

**Income statement for the year ending 31st December, 2008 :**

| | | *Rs.* |
|---|---|---|
| Sales | | 10,000 |
| Cost of goods sold : | | |
| Opening stock (FIFO) | 2,400 | |
| Purchases (Net) | 4,600 | |
| Cost of goods available for sale | 7,000 | |
| Less : Closing stock (FIFO) | 2,000 | |
| Gross profit on sales | | 5,000 |
| Operating expenses | 800 | |
| Depreciation | 1,500 | |
| Interest on debentures paid on 31-12-2008 | 600 | 2,900 |
| Retained earnings | | 2,100 |

**16.** 2008 ರ ಜನವರಿ 1 ರಲ್ಲಿರುವಂತೆ A ಲಿಮಿಟೆಡ್‌ನ ಸಂತುಲನ ಪಟ್ಟಿ ಮತ್ತು 2008 ರ 31 ಡಿಸೆಂಬರ್‌ಗೆ ಕೊನೆಯಾಗುವ ವರ್ಷದಲ್ಲಿ ಆದಾಯದ ವಿವರಣ ಪಟ್ಟಿಗಳನ್ನು ಕೆಳಗೆ ನಿರೂಪಿಸಲಾಗಿದೆ :

**ಸಂತುಲನ ಪಟ್ಟಿ**
**2008 ರ ಜನವರಿ 1 ರಲ್ಲಿರುವಂತೆ**

| | ರೂ. | | ರೂ. |
|---|---|---|---|
| ಶೇರು ಬಂಡವಾಳ | 10,000 | ಹೊಸಯಂತ್ರ | 15,000 |
| 10% ಡಿಬೆಂಚರ್‌ಗಳು | 6,000 | ದಾಸ್ತಾನು | 2,400 |
| ಸಾಲನೀಡಿಕೆದಾರರು | 3,600 | ಸಾಲಗಾರರು | 1,200 |
| | | ನಗದು | 1,000 |
| | 19,600 | | 19,600 |

**2008 ರ ಡಿಸೆಂಬರ್ 31 ಕ್ಕೆ ಕೊನೆಯಾಗುವ ವರ್ಷದ ಆದಾಯ ವಿವರಣ ಪಟ್ಟಿ :**

| | | ರೂ. |
|---|---|---|
| ಮಾರಾಟ | | 10,000 |
| ಮಾರಾಟ ಮಾಡಿದ ಸರಕುಗಳ ವೆಚ್ಚ : | | |
| ಆರಂಭದ ದಾಸ್ತಾನು (FIFO) | 2,400 | |
| ಖರೀದಿಗಳು (ನಿವ್ವಳ) | 4,600 | |
| ಮಾರಾಟಕ್ಕೆ ಲಭ್ಯವಿರುವ ಸರಕುಗಳ ವೆಚ್ಚ | 7,000 | |
| ಕಳೆಯಿರಿ : ಮುಕ್ತಾಯದ ದಾಸ್ತಾನು (FIFO) | 2,000 | |
| ಮಾರಾಟಗಳ ಮೇಲೆ ಸ್ಥೂಲ ಲಾಭ | | 5,000 |
| ಕಾರ್ಯಾಚರಣಾ ವೆಚ್ಚಗಳು | 800 | |
| ಸವಕಳಿ | 1,500 | |
| 31-12-2008 ರಂದು ಸಂದಾಯ ಮಾಡಿದ ಡಿಬೆಂಚರ್‌ಗಳ ಮೇಲೆ | 600 | 2,900 |
| ಉಳಿಸಿಕೊಂಡ ಗಳಿಕೆಗಳು | | 2,100 |

Debtors and creditors balances remained constant throughout the year. General price indices were as given below :

| | |
|---|---|
| On 1st January, 2008 | 200 |
| Average for the year | 240 |
| On 31st December, 2008 | 300 |

You are required to prepare the final accounts for the year 2008 after adjusting for price level changes under CPP method.

**17.** Ascertain the value of goodwill of ABC Ltd. carrying on business from the following :

**Balance Sheet as at 30-6-2008**

| Liabilities | Rs. | Assets | Rs. |
|---|---|---|---|
| Paid up capital – 2,500 shares of Rs. 100 each fully paid | 25,00,000 | Goodwill at cost | 2,50,000 |
| Bank overdraft | 4,80,000 | Land and building at cost | 11,00,000 |
| Sundry creditors | 8,05,000 | Plant and Machinery at cost less depreciation | 10,00,000 |
| Provision for taxation | 4,25,000 | Stock-in-trade | 15,00,000 |
| P & L appropriation account | 6,00,000 | Book debts less provision for bad debts | 9,60,000 |
| | 48,10,000 | | 48,10,000 |

The company started operations in 2003 with a paid-up capital as aforestated of Rs. 25,00,000. Profit earned before providing for taxation have been as follows :

| *Year ended 30th June* | *Rs.* |
|---|---|
| 2004 | 6,00,000 |
| 2005 | 7,50,000 |
| 2006 | 8,50,000 |
| 2007 | 9,50,000 |
| 2008 | 8,50,000 |

Income tax @ 50% has been payable on these profits. Dividends have been distributed from the profits of the first three years @ 10% and from those of the next two years @ 15% of the paid up capital.

ಸಾಲಗಾರರು ಮತ್ತು ಸಾಲನೀಡಿಕೆದಾರರ ಶಿಲ್ಕುಗಳು ವರ್ಷದುದ್ದಕ್ಕೂ ಸ್ಥಿರವಾಗಿದ್ದವು. ಸಾಮಾನ್ಯ ಬೆಲೆ ಸೂಚಿಗಳು ಕೆಳಕಂಡಂತಿದ್ದವು :

| | |
|---|---|
| 2008 ರ ಜನವರಿ 1 ರಂದು | 200 |
| ವರ್ಷದ ಸರಾಸರಿ | 240 |
| 2008 ರ ಡಿಸೆಂಬರ್ 31 ರಂದು | 300 |

ನೀವು, CPP ವಿಧಾನದಲ್ಲಿ ಬೆಲೆ ಮಟ್ಟದ ಬದಲಾವಣೆಗಳನ್ನು ಹೊಂದಾಣಿಸಿದ ನಂತರ 2008 ನೇ ಸಾಲಿಗಾಗಿ ಅಂತಿಮ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಬೇಕಿದೆ.

**17.** ವ್ಯವಹಾರ ನಡೆಸುತ್ತಿರುವ ABC ಲಿಮಿಟೆಡ್‌ನ ಗುಡ್‌ವಿಲ್‌ನ ಮೌಲ್ಯವನ್ನು ಕೆಳಕಂಡ ಅಂಶಗಳಿಂದ ನಿರ್ಧಾರ ಮಾಡಿ :

**30-6-2008 ರಲ್ಲಿರುವಂತೆ ಸಂತುಲನಪಟ್ಟಿ**

| ಹೊಣೆಗಾರಿಕೆಗಳು | ರೂ. | ಸ್ವತ್ತುಗಳು | ರೂ. |
|---|---|---|---|
| ಸಂದಾಯವಾದ ಬಂಡವಾಳ 2,500 ಸಂಪೂರ್ಣ ಪಾವತಿಯಾದ ಪ್ರತಿಯೊಂದು 100 ರೂ. ಬೆಲೆಯ ಶೇರುಗಳು | 25,00,000 | ವೆಚ್ಚದಲ್ಲ ಗುಡ್‌ವಿಲ್ | 2,50,000 |
| ಬ್ಯಾಂಕ್ ಓವರ್ ಡ್ರಾಫ್ಟ್ | 4,80,000 | ಭೂಮಿ ಮತ್ತು ಕಟ್ಟಡ ವೆಚ್ಚದಲ್ಲಿ | 11,00,000 |
| ಸಣ್ಣ ಪುಟ್ಟ ಸಾಲನೀಡಿಕೆದಾರರು | 8,05,000 | ಸ್ಥಾವರ ಮತ್ತು ಯಂತ್ರಸಾಮಗ್ರಿಗಳು ವೆಚ್ಚದಲ್ಲಿ ಕಳೆಯಿರಿ ಸವಕಳಿ | 10,00,000 |
| ತೆರಿಗೆ ನಿರ್ಧಾರಣಕ್ಕೆ ಅವಕಾಶ | 4,25,000 | ವ್ಯಾಪಾರ ದಾಸ್ತಾನು | 15,00,000 |
| ಲಾಭ ಮತ್ತು ನಷ್ಟದ ಸರಿಹೊಂದಾಣಿಕೆ ಲೆಕ್ಕ | 6,00,000 | ಪುಸ್ತಕ ಸಾಲಗಳು ಕಳೆಯಿರಿ ವಸೂಲಾಗದ ಸಾಲಗಳು | 9,60,000 |
| | 48,10,000 | | 48,10,000 |

ಕಂಪನಿಯು, ಮೇಲೆ ಹೇಳಿದಂತೆ 25,00,000 ರೂ.ಗಳ ಸಂದಾಯ ಬಂಡವಾಳದೊಂದಿಗೆ 2003 ರಲ್ಲಿ ಕಾರ್ಯಾಚರಣೆಯನ್ನು ಆರಂಭಿಸಿತು. ತೆರಿಗೆ ನಿರ್ಧಾರಣಕ್ಕೆ ಅವಕಾಶ ಒದಗಿಸುವ ಮೊದಲು ಗಳಿಸಿದ ಲಾಭ ಕೆಳಗಿನಂತಿದೆ :

| *ಜೂನ್ 30 ಕ್ಕೆ ಕೊನೆಯಾದ ವರ್ಷ* | *ರೂ.* |
|---|---|
| 2004 | 6,00,000 |
| 2005 | 7,50,000 |
| 2006 | 8,50,000 |
| 2007 | 9,50,000 |
| 2008 | 8,50,000 |

ಈ ಲಾಭಗಳ ಮೇಲೆ 50% ರಂತೆ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ. ಮೊದಲ ಮೂರು ವರ್ಷಗಳ ಲಾಭಗಳಿಂದ ಸಂದಾಯ ಬಂಡವಾಳದ 10% ರಂತೆ ಮತ್ತು ಆ ಮುಂದಿನ 2 ವರ್ಷಗಳ ಲಾಭಗಳಿಂದ 15% ರಂತೆ ಲಾಭಾಂಶಗಳ ವಿತರಣೆ ಮಾಡಲಾಗಿದೆ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** What points should be kept in view while preparing a written audit programme by an auditor ? Explain the advantages and disadvantages of the use of an audit programme.

**19.** Discuss the Modigliani and Millar (MM) hypothesis of capital structure and its implications for designing an appropriate capital structure in the Indian context.

**20.** Sneha Ltd. manufacturing a single product is facing severe competition in selling it at Rs. 50 per unit. The company is operating at 60 per cent level of activity at which level sales are Rs. 12,00,000; variable costs are Rs. 30 per unit; semi-variable costs may be considered fixed at Rs. 90,000 when output is nil and the variable element is Rs. 250 for each additional 1 per cent level of activity; fixed costs are Rs. 1,50,000 at the present level of activity, but if a level of activity of 80 per cent or above is reached, these costs are expected to increase by Rs. 50,000.

To cope with the competition, the management of the company is considering a proposal to reduce the selling price by 5 per cent. You are required to prepare a statement showing the operating profit at levels of activity of 60 per cent, 70 per cent, and 82 per cent assuming that :

(a) The selling price remains at Rs. 50.

(b) The selling price is reduced by 5 per cent.

Show also the number of units, which will be required to be sold to maintain the present profits if the company decides to reduce the selling price of the product by 5 per cent.

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಲೆಕ್ಕಪರಿಶೋಧಕರು ಲಿಖಿತ ಲೆಕ್ಕಪರಿಶೋಧನಾ ಪ್ರೋಗ್ರಾಂ ಅನ್ನು ಸಿದ್ಧಪಡಿಸುವಾಗ ಯಾವಯಾವ ಅಂಶಗಳನ್ನು ಗಮನದಲ್ಲಿಟ್ಟು ಕೊಂಡಿರಬೇಕು ? ಲೆಕ್ಕ ಪರಿಶೋಧನಾ ಪ್ರೋಗ್ರಾಂ ಅನ್ನು ಬಳಸುವುದರ ಅನುಕೂಲ ಮತ್ತು ಅನಾನುಕೂಲಗಳೇನು ಎಂಬುದನ್ನು ವಿವರಿಸಿ.

**19.** ಮೋಡಿಗ್ಲಿಯಾನಿ ಮತ್ತು ಮಿಲರ್ (MM) ಅವರು ಪ್ರತಿಪಾದಿಸಿದ ಬಂಡವಾಳ ರಚನೆಯ ಪರಿಕಲ್ಪನೆ ಮತ್ತು ಭಾರತೀಯ ಸಂದರ್ಭದಲ್ಲಿ ಒಂದು ಸೂಕ್ತ ಬಂಡವಾಳ ರಚನೆಯ ವಿನ್ಯಾಸರೂಪಿಸುವಲ್ಲಿ ಈ ಪರಿಕಲ್ಪನೆಯ ಪ್ರಭಾವ ಕುರಿತು ಚರ್ಚಿಸಿ.

**20.** ಒಂದೇ ಒಂದು ಉತ್ಪನ್ನವನ್ನು ತಯಾರಿಸುತ್ತಿರುವ ಸ್ನೇಹ ಲಿಮಿಟೆಡ್ ಸಂಸ್ಥೆಯು ಒಂದು ಘಟಕಕ್ಕೆ 50 ರೂ.ಗಳಂತೆ ಮಾರುವಲ್ಲಿ ತೀವ್ರ ಪೈಪೋಟಿ ಎದುರಿಸುತ್ತಿದೆ. ಕಂಪನಿಯು ಶೇಕಡಾ 60 ರಷ್ಟು ಕಾರ್ಯ ಚಟುವಟಿಕೆಯ ಮಟ್ಟದಲ್ಲಿ ನಡೆಯುತ್ತಿದೆ, ಈ ಮಟ್ಟದಲ್ಲಿ ಮಾರಾಟಗಳು 12,00,000 ರೂ. ಮತ್ತು ವ್ಯತ್ಯಾಸೀ ವೆಚ್ಚಗಳು ಪ್ರತಿ ಘಟಕಕ್ಕೆ 30 ರೂ. ನಷ್ಟು ಇವೆ; ಏನೂ ಉತ್ಪತ್ತಿ ಇಲ್ಲದಿದ್ದಾಗ ಮತ್ತು ವ್ಯತ್ಯಾಸೀ ಅಂಶವು ಪ್ರತೀ ಶೇಕಡಾ 1 ರಷ್ಟು ಹೆಚ್ಚುವರಿ ಚಟುವಟಿಕೆಯ ಮಟ್ಟಕ್ಕೆ 250 ರೂ. ಆಗಿದ್ದಾಗ ಅರೆ ವ್ಯತ್ಯಾಸೀ ವೆಚ್ಚಗಳನ್ನು ನಿಶ್ಚಿತ 90,000 ರೂ. ಎಂದು ಪರಿಗಣಿಸಬಹುದು; ಈಗಿನ ಕಾರ್ಯ ಚಟುವಟಿಕೆಯ ಮಟ್ಟಕ್ಕೆ ನಿಶ್ಚಿತ ವೆಚ್ಚಗಳು 1,50,000 ರೂ.ಗಳು ಆದರೆ ಶೇಕಡಾ 80 ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಚಟುವಟಿಕೆಯ ಮಟ್ಟ ತಲುಪಿದಾಗ ಈ ವೆಚ್ಚಗಳು 50,000 ರೂ. ಗಳಷ್ಟು ಏರಿಕೆಯಾಗುತ್ತವೆ ಎಂದು ನಿರೀಕ್ಷಿಸಲಾಗಿದೆ. ಪೈಪೋಟಿಯನ್ನು ಸರಿದೂಗಿಸುವುದಕ್ಕಾಗಿ, ಕಂಪನಿಯ ಆಡಳಿತವರ್ಗವು ಮಾರಾಟ ಬೆಲೆಯನ್ನು ಶೇ 5 ರಷ್ಟು ತಗ್ಗಿಸುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ. ನೀವು ಈ ಕೆಳಕಂಡ ಗ್ರಹಿಕೆಯನ್ನು ಆಧರಿಸಿ ಶೇಕಡಾ 60, ಶೇಕಡಾ 70 ಮತ್ತು ಶೇಕಡಾ 82 ರಷ್ಟು ಚಟುವಟಿಕೆಯ ಮಟ್ಟಗಳಲ್ಲಿ ಕಾರ್ಯಾಚರಣಾ ಲಾಭವನ್ನು ತೋರಿಸುವ ವಿವರಣ ಪಟ್ಟಿಯನ್ನು ಸಿದ್ಧಪಡಿಸಬೇಕು. ಗ್ರಹಿಕೆಯಲ್ಲಿರಬೇಕಾದ ಅಂಶಗಳು :

(a) ಮಾರಾಟ ಬೆಲೆಯು 50 ರೂ. ಗಳಲ್ಲಿಯೇ ಇರುತ್ತದೆ.

(b) ಮಾರಾಟ ಬೆಲೆಯನ್ನು ಶೇ, 5 ರಷ್ಟು ತಗ್ಗಿಸಲಾಗಿದೆ.

ಒಂದು ವೇಳೆ ಸಂಸ್ಥೆಯು ತನ್ನ ಉತ್ಪನ್ನದ ಮಾರಾಟ ಬೆಲೆಯನ್ನು ಶೇ 5 ರಷ್ಟು ತಗ್ಗಿಸಲು ನಿರ್ಧರಿಸಿದರೆ, ಅದು ತನ್ನ ಈಗಿನ ಲಾಭಗಳನ್ನು ಕಾಯ್ದು ಕೊಳ್ಳಬೇಕಾದರೆ ಎಷ್ಟು ಸಂಖ್ಯೆಯ ಘಟಕಗಳನ್ನು ಮಾರಾಟ ಮಾಡಬೇಕಾಗುತ್ತದೆ ಎಂಬುದನ್ನೂ ತೋರಿಸಿ.

**21.** Beta Manufacturing Company Ltd., Bangalore was registered with a nominal capital of Rs. 6,00,000 in equity shares of Rs. 10 each. The following is the list of balances extracted from its books on 31st March 2008 :

| | Rs. | | Rs. |
|---|---|---|---|
| Furniture | 7,200 | Freight & Carriage | 13,115 |
| Calls in arrears | 7,500 | Salaries | 14,500 |
| Plant & Machinery | 3,30,000 | Directors' Fees | 5,725 |
| Business Premises | 3,00,000 | Bad debts | 2,110 |
| Interim dividend paid | 37,500 | Debenture interest paid | 9,000 |
| Stock (1-4-2007) | 75,000 | Subscribed called-up and paid-up capital | 4,00,000 |
| Sundry debtors | 87,000 | 6% Debentures | 3,00,000 |
| Goodwill | 25,000 | Profit & Loss A/c (Cr.) | 14,500 |
| Cash in hand | 750 | Bills payable | 38,000 |
| Cash at bank | 39,900 | Sundry creditors | 50,000 |
| Purchases | 1,85,000 | Sales | 4,15,000 |
| Preliminary Expenses | 5,000 | General Reserve | 25,000 |
| Wages | 84,865 | Bad debts Reserve (1-4-2007) | 3,500 |
| General Expenses | 6,835 | | |
| Advertising | 10,000 | | |

The following adjustments have to be made :

(a) Depreciate plant and machinery by 5%, business premises by 2% and write off Rs. 1,200 on furniture.

21. ಬಾಟಾ ತಯಾರಿಕಾ ಕಂಪನಿ ಲಿ. ಬೆಂಗಳೂರು ಇದು ಪ್ರತಿಯೊಂದು 10 ರೂ.ಗಳ ಈಕ್ವಿಟಿ ಶೇರುಗಳಲ್ಲಿ 6,00,000 ರೂ. ನಾಮೀಯ ಬಂಡವಾಳದೊಂದಿಗೆ ನೋಂದಾಯಿತವಾಯಿತು. 2008 ರ ಮಾರ್ಚ್ 31 ರಲ್ಲಿರುವಂತೆ ಆದರ ಪುಸ್ತಕಗಳಿಂದ ನಿರೂಪಿಸಲಾದ ಶಿಲ್ಕುಗಳ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ :

| | ರೂ. | | ರೂ. |
|---|---|---|---|
| ಪೀಠೋಪಕರಣ | 7,200 | ಸಾಗಣೆ ವೆಚ್ಚ ಮತ್ತು ವಾಹನ | 13,115 |
| ಬಾಕಿಯಲ್ಲಿರುವ ಕರೆಗಳು | 7,500 | ವೇತನಗಳು | 14,500 |
| ಸ್ಥಾವರ ಮತ್ತು ಯಂತ್ರಸಾಮಗ್ರಿ | 3,30,000 | ನಿರ್ದೇಶಕರ ಶುಲ್ಕ | 5,725 |
| ವ್ಯವಹಾರದ ಆವರಣ | 3,00,000 | ವಸೂಲಾಗದ ಸಾಲಗಳು | 2,110 |
| ಸಂದಾಯವಾದ ತತ್ಕಾಲೀನ ಲಾಭಾಂಶ | 37,500 | ಸಂದಾಯವಾದ ಡಿಬೆಂಚರ್ ಬಡ್ಡಿ | 9,000 |
| ದಾಸ್ತಾನು (1-4-2007) | 75,000 | ವಂತಿಗೆ ಸಲ್ಲಿಸಿದ, ಕರೆಯಲಾದ ಹಾಗೂ ಸಂದಾಯವಾದ ಬಂಡವಾಳ | 4,00,000 |
| ಸಣ್ಣ ಪುಟ್ಟ ಸಾಲಿಗರು | 87,000 | 6% ಡಿಬೆಂಚರ್‌ಗಳು | 3,00,000 |
| ಗುಡ್‌ವಿಲ್ | 25,000 | ಲಾಭ ಮತ್ತು ನಷ್ಟದ ಖಾತೆ (Cr) | 14,500 |
| ಕೈಯಲ್ಲಿರುವ ನಗದು | 750 | ಸಂದಾಯ ಮಾಡಬೇಕಿರುವ ಬಿಲ್‌ಗಳು | 38,000 |
| ಬ್ಯಾಂಕಿನಲ್ಲಿರುವ ನಗದು | 39,900 | ಸಣ್ಣ ಪುಟ್ಟ ಸಾಲನೀಡಿಕೆದಾರರು | 50,000 |
| ಖರೀದಿಗಳು | 1,85,000 | ಮಾರಾಟಗಳು | 4,15,000 |
| ಪ್ರಾಥಮಿಕ ವೆಚ್ಚಗಳು | 5,000 | ಸಾಮಾನ್ಯ ಮೀಸಲು | 25,000 |
| ಮಜೂರಿಗಳು | 84,865 | ವಸೂಲಾಗದ ಸಾಲಗಳು ಮೀಸಲು (1-4-2007) | 3,500 |
| ಸಾಮಾನ್ಯ ವೆಚ್ಚಗಳು | 6,835 | | |
| ಜಾಹಿರಾತು | 10,000 | | |

ಈ ಕೆಳಕಂಡ ಹೊಂದಾಣಿಕೆಗಳನ್ನು ಮಾಡಬೇಕಿದೆ :

(a) ಸ್ಥಾವರ ಮತ್ತು ಯಂತ್ರ ಸಾಮಗ್ರಿಯಲ್ಲಿ 5% ಸವಕಳಿ ಮಾಡಿ, ವ್ಯವಹಾರದ ಆವರಣಕ್ಕೆ 2% ಸವಕಳಿಮಾಡಿ ಹಾಗೂ ಪೀಠೋಪಕರಣಗಳ ಮೇಲೆ 1,200 ರೂ. ಮನ್ನಾ ಮಾಡಿ.

(b) Write off Rs. 1,000 from preliminary expenses.

(c) Provide for half-year's debenture interest.

(d) The reserve for bad debts on 31st March, 2008 should be equal to 1 per cent on sales.

(e) Directors' fees are outstanding to the extent of Rs. 275 and salaries Rs. 500.

(f) Goods of the value of Rs. 1,500 were distributed as free samples during the year. But no entry in this respect had been made.

(g) The stock on 31st March 2008 was valued at Rs. 95,000.

You are required to prepare the Profit and Loss Account for the year ending 31st March 2008 and the Balance Sheet as on the same date in vertical form.

**22.** Mr. Gopalswamy desires to invest Rs. 32,000 in equity shares of ABC Ltd. He seeks your advice as to the maximum number of shares he can purchase based on the fair value of shares to be determined by you.

The following information is available :

| | *Rs.* |
|---|---|
| Issued and paid-up capital : | |
| 6% Preference shares of Rs. 100 each | 5,50,000 |
| Equity shares of Rs. 10 each | 3,50,000 |
| | 9,00,000 |

Average net profit after tax is Rs. 75,000. Expected normal yield is 6% in similar companies. It is found that net assets on revaluation are worth Rs. 70,000 more than the book value.

(b) ಪ್ರಾಥಮಿಕ ವೆಚ್ಚಗಳಿಂದ 1,000 ರೂ. ಮನ್ನಾಮಾಡಿ.

(c) ಅರ್ಧ ವರ್ಷದ ಡಿಬೆಂಚರ್ ಬಡ್ಡಿಗೆ ಅವಕಾಶಮಾಡಿ.

(d) 2008, ಮಾರ್ಚ್ 31 ರಲ್ಲಿರುವಂತೆ ವಸೂಲಾಗದ ಸಾಲಗಳಿಗಾಗಿಟ್ಟ ಮೀಸಲು, ಮಾರಾಟದ ಶೇಕಡಾ 1 ಕ್ಕೆ ಸಮವಾಗಿರತಕ್ಕದ್ದು.

(e) ನಿರ್ದೇಶಕರ ಶುಲ್ಕವು 275 ರೂ. ಗಳಷ್ಟು ಮತ್ತು ವೇತನಗಳು 500 ರೂ. ಗಳಷ್ಟು ಬಾಕಿಇವೆ.

(f) 1,500 ರೂ. ಗಳಷ್ಟು ಮೌಲ್ಯದ ಸರಕನ್ನು ವರ್ಷದ ಅವಧಿಯಲ್ಲಿ ಉಚಿತ ಸ್ಯಾಂಪಲ್‌ಗಳಾಗಿ ವಿತರಿಸಲಾಯಿತು ಆದರೆ ಈ ಸಂಬಂಧವಾಗಿ ಯಾವ ನಮೂದನ್ನೂ ಮಾಡಿಲ್ಲ.

(g) 2008 ರ ಮಾರ್ಚ್ 31 ರಂತೆ ದಾಸ್ತಾನಿನ ಮೌಲ್ಯ 95,000 ರೂ. ಗಳೆಂದು ಲೆಕ್ಕ ಹಾಕಿದೆ.

2008 ರ ಮಾರ್ಚ್ 31ಕ್ಕೆ ಕೊನೆಯಾಗುವ ವರ್ಷಕ್ಕೆ ನೀವು ಲಾಭ ಮತ್ತು ನಷ್ಟದ ಲೆಕ್ಕ ಪತ್ರವನ್ನು ಹಾಗೂ ಇದೇ ದಿನಾಂಕಕ್ಕೆ ಸಂತುಲನ ಪಟ್ಟಿಯನ್ನು ಲಂಬರೂಪ (vertical form) ದಲ್ಲಿ ಸಿದ್ಧಪಡಿಸಬೇಕು.

22. ಶ್ರೀ. ಗೋಪಾಲ ಸ್ವಾಮಿಯವರು ABC ಲಿಮಿಟೆಡ್‌ನ ಈಕ್ವಿಟಿ ಶೇರುಗಳಲ್ಲಿ 32,000 ರೂ. ಗಳನ್ನು ಹೂಡಿಕೆ ಮಾಡಲು ಆಪೇಕ್ಷಿಸಿದ್ದಾರೆ. ನೀವು ನಿರ್ಣಯಿಸಿದಂತಹ ಶೇರುಗಳ ನ್ಯಾಯಸಮ್ಮತ ಮೌಲ್ಯವನ್ನು ಆಧರಿಸಿ ತಾವು ಗರಿಷ್ಠ ಎಷ್ಟು ಸಂಖ್ಯೆಯ ಶೇರುಗಳನ್ನು ಖರೀದಿಸಬಹುದು ಎಂಬ ಬಗ್ಗೆ ಅವರು ನಿಮ್ಮ ಸಲಹೆ ಕೇಳುತ್ತಿದ್ದಾರೆ.

ಕೆಳಕಂಡ ಮಾಹಿತಿ ಲಭ್ಯವಿದೆ :

| | ರೂ. |
|---|---|
| ನೀಡಿದ ಹಾಗೂ ಪಾವತಿಯಾದ ಬಂಡವಾಳ : | |
| ಪ್ರತಿಯೊಂದು 100 ರೂ.ಗಳ 6% ಆದ್ಯತಾ ಶೇರುಗಳು | 5,50,000 |
| ಪ್ರತಿಯೊಂದು 10 ರೂ. ಗಳ ಈಕ್ವಿಟಿ ಶೇರುಗಳು | 3,50,000 |
| | 9,00,000 |

ತೆರಿಗೆಯ ನಂತರ ಸರಾಸರಿ ನಿವ್ವಳಲಾಭ 75,000 ರೂ.ಗಳು ಸಾಮಾನ್ಯವಾಗಿ ಇಂಥದೇ ಕಂಪನಿಗಳಿಂದ ನಿರೀಕ್ಷಿಸಲಾದ ಸಾಮಾನ್ಯ ಲಾಭ 6%. ಮರುಮೌಲ್ಯಮಾಪನ ಮಾಡಿದ ನಂತರ ನಿವ್ವಳ ಸ್ವತ್ತುಗಳ ಮೌಲ್ಯವು ಪುಸ್ತಕಮೌಲ್ಯಕ್ಕಿಂತ 70,000 ರೂ.ಗಳಷ್ಟು ಹೆಚ್ಚಿಗೆ ಇರುವುದು ಕಂಡುಬಂದಿದೆ.

06/2

# 2008

## COMMERCE AND ACCOUNTANCY

### Paper 2

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| A | 20 marks |
| B | 100 marks |
| C | 90 marks |
| D | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

*4×5=20*

*Answer each question in about 50 words. Each question carries 5 marks.*

1. (a) What is organisational structure ?

   (b) Define transactional analysis.

   (c) What do you understand by personnel audit ?

   (d) Define collective bargaining.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಸಾಂಸ್ಥಿಕ ರಚನೆ ಎಂದರೇನು ?

(ಬಿ) ಪರಸ್ಪರ ವ್ಯವಹಾರ ವಿಶ್ಲೇಷಣೆಯನ್ನು ವಿವರಿಸಿ.

(ಸಿ) ಸಿಬ್ಬಂದಿ ಲೆಕ್ಕ ಪರಿಶೋಧನೆ ಎಂದರೇನು ?

(ಡಿ) ಸಾಮೂಹಿಕ ಚೌಕಾಶಿ ಎಂದರೇನು ? ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

**2.** Explain the characteristics of a bureaucracy.

**3.** Discuss the managerial implications of Victor Vroom's Expectancy Theory of Motivation.

**4.** Distinguish between 'strong' and 'weak' cultures. Explain the primary characteristics that capture the essence of an organisation's culture.

**5.** Explain different bases of power in organisations, with suitable examples.

**6.** Discuss the leadership styles developed by Blake and Mouton in their 'Managerial grid'.

**7.** Explain Kurt Lewin's Three-step Model of managing change in organisations.

**8.** Discuss the key assumptions of Douglas McGregor's Theory X and Theory Y.

**9.** Explain the functional and dysfunctional aspects of informal organisation.

**10.** What are the key attributes of the virtual organisation ?

**11.** Explain the objectives of Workers' Education and the role and relevance of the Central Board of Workers' Education in India.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಅಧಿಕಾರಶಾಹಿಯ ಲಕ್ಷಣಗಳನ್ನು ವಿವರಿಸಿ.

**3.** ವಿಕ್ಟರ ವ್ರೂಮ್‌ನ ಅಭಿಪ್ರೇರಣೆಯ ನಿರೀಕ್ಷಣಾ ಸಿದ್ಧಾಂತವು ವ್ಯವಸ್ಥಾಪನ ಕಾರ್ಯದ ಮೇಲೆ ಬೀರುವ ಪರಿಣಾಮವನ್ನು ಕುರಿತು ಚರ್ಚಿಸಿ.

**4.** 'ಬಲಶಾಲಿ' ಮತ್ತು 'ದುರ್ಬಲ' ಸಂಸ್ಕೃತಿಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿ. ಸಾಂಸ್ಥಿಕ ಸಂಸ್ಕೃತಿಯ ಒಟ್ಟು ಸಾರವನ್ನು ತಿಳಿಸುವಂಥ ಪ್ರಾಥಮಿಕ ಲಕ್ಷಣಗಳನ್ನು ವಿವರಿಸಿ.

**5.** ಸಂಸ್ಥೆಗಳಲ್ಲಿ ಕಂಡುಬರುವ ಬೇರೆಬೇರೆಯ ಅಧಿಕಾರದ ನೆಲೆಗಟ್ಟುಗಳನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.

**6.** ಬ್ಲೇಕ್ ಮತ್ತು ಮೌಟನ್ ಅವರು ತಮ್ಮ ವ್ಯವಸ್ಥಾಪಕ ಜಾಲ (Managerial grid) ದಲ್ಲಿ ನಿರೂಪಿಸಿರುವ ನಾಯಕತ್ವ ಶೈಲಿಗಳನ್ನು ಕುರಿತು ಚರ್ಚಿಸಿ.

**7.** ಸಂಸ್ಥೆಗಳಲ್ಲಿ ಬದಲಾವಣೆಯನ್ನು ನಿರ್ವಹಿಸುವ ಕುರ್ಟ್ ಲೆವಿನ್‌ನ ಮೂರು-ಹಂತಗಳ ಮಾದರಿಯನ್ನು ವಿವರಿಸಿ.

**8.** ಡಗ್ಲಾಸ್ ಮ್ಯಾಕ್‌ಗ್ರೆಗೊರ್‌ನ ತರ್ಕ X ಮತ್ತು ತರ್ಕ Y ಯಲ್ಲಿರುವ ಮುಖ್ಯ ಗ್ರಹಿಕೆಗಳ ಬಗ್ಗೆ ಚರ್ಚಿಸಿ.

**9.** ಅನೌಪಚಾರಿಕ ಸಂಸ್ಥಾವ್ಯವಸ್ಥೆಯ ಕ್ರಿಯಾ ಹಾಗೂ ಕ್ರಿಯಾ ವಿಕೃತಿಯ ಅಂಶಗಳನ್ನು ವಿವರಿಸಿ.

**10.** ವಾಸ್ತವ ಸಂಸ್ಥಾ ವ್ಯವಸ್ಥೆಯ ಮುಖ್ಯ ಗುಣ ಲಕ್ಷಣಗಳೇನು ?

**11.** ಕಾರ್ಮಿಕರ ಶಿಕ್ಷಣದ ಧ್ಯೇಯಗಳೇನು ? ಮತ್ತು ಭಾರತದ ಕಾರ್ಮಿಕರ ಶಿಕ್ಷಣದ ಕೇಂದ್ರೀಯ ಮಂಡಳಿಯ ಪಾತ್ರ ಹಾಗೂ ಪ್ರಸ್ತುತತೆಯನ್ನು ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** How do employees respond to organisational politics ? Explain the 'defensive behaviours' normally exhibited by employees when politics is seen as a threat.

**13.** Explain the major challenges of organisational behaviour as a dynamic system.

**14.** Explain the major techniques of executive development in the Indian corporate sector.

**15.** Discuss the role and relevance of organisation development (OD) techniques for improving organisational effectiveness.

**16.** How do trade unions affect the political, economic and social structure of the country in the long run ? Explain this in the light of Sociological Approach advocated by Frank Tannenbaum and Classless Society Approach of Karl Marx.

**17.** Discuss the impact of International Labour Organisation (ILO) on the Indian labour.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಸಂಸ್ಥಾ ರಾಜಕಾರಣಕ್ಕೆ ಉದ್ಯೋಗಿಗಳು ಹೇಗೆ ಪ್ರತಿಸ್ಪಂದಿಸುತ್ತಾರೆ ? ಈ ರಾಜಕಾರಣವು ಒಂದು ಬೆದರಿಕೆಯಾಗಿ ಕಂಡುಬಂದಾಗ ಉದ್ಯೋಗಿಗಳು ಸಾಮಾನ್ಯವಾಗಿ ತೋರ್ಪಡಿಸುವ 'ರಕ್ಷಣಾತ್ಮಕ ವರ್ತನೆ' ಗಳನ್ನು ವಿವರಿಸಿ.

**13.** ಒಂದು ಕ್ರಿಯಾತ್ಮಕ ವ್ಯವಸ್ಥೆಯಾಗಿ ಸಾಂಸ್ಥಿಕ ವರ್ತನೆಯ ಪ್ರಮುಖ ಸವಾಲುಗಳು ಯಾವುವು ವಿವರಿಸಿ.

**14.** ಭಾರತದ ಕಾರ್ಪೊರೇಟ್ ವಲಯದ ಕಾರ್ಯನಿರ್ವಾಹಕ ಅಭಿವೃದ್ಧಿಯ ಮುಖ್ಯ ತಂತ್ರವಿಧಾನಗಳನ್ನು ವಿವರಿಸಿ.

**15.** ಸಾಂಸ್ಥಿಕ ದಕ್ಷತೆಯನ್ನು ಸುಧಾರಿಸುವಲ್ಲಿ ಸಂಸ್ಥಾ ಅಭಿವೃದ್ಧಿ (OD) ಕಾರ್ಯತಂತ್ರಗಳ ಪಾತ್ರ ಹಾಗೂ ಪ್ರಸ್ತುತತೆಯನ್ನು ಕುರಿತು ಚರ್ಚಿಸಿ.

**16.** ಕಾರ್ಮಿಕ ಸಂಘಟನೆಗಳು ಒಂದು ದೇಶದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ರಚನೆಯ ಮೇಲೆ ದೀರ್ಘಾವಧಿಯಲ್ಲಿ ಯಾವ ರೀತಿ ಪರಿಣಾಮ ಬೀರುತ್ತವೆ ? ಇದನ್ನು ಫ್ರಾಂಕ್ ಟ್ಯಾನೆನ್‌ಬಮ್ ಪ್ರತಿಪಾದಿಸಿದ ಸಾಮಾಜಿಕ ದೃಷ್ಟಿಕೋನದ ನಿಟ್ಟಿನಿಂದ ಹಾಗೂ ಕಾರ್ಲ್ ಮಾರ್ಕ್ಸ್‌ನ ವರ್ಗರಹಿತ ಸಮಾಜದ ನಿಟ್ಟಿನಿಂದ ವಿವರಿಸಿ.

**17.** ಭಾರತದ ಕಾರ್ಮಿಕ ವ್ಯವಸ್ಥೆಯ ಮೇಲೆ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO) ಯಾವ ಪ್ರಭಾವ ಬೀರಿದೆ ? ಚರ್ಚಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** Explain the different stages of conflict process in an organisation. Discuss the managerial implications of conflict management techniques.

**19.** Discuss the contingency model for leadership developed by Fred Fiedler and Hersey and Blanchard's situational leadership theory.

**20.** What are the sources of resistance to change ? Explain the different tactics used by change agents to deal with resistance to change.

**21.** Critically evaluate the various schemes formulated for Workers' Participation in Management in the Indian industries. What are the major factors responsible for failure of these schemes in the Indian context ?

**22.** What are the main mechanisms to prevent industrial disputes and to promote industrial harmony ? Discuss the various authorities for the investigation and settlement of industrial disputes.

 

## ಭಾಗ D

3×30=90

*ಕೆಳಗಿನ ಯಾವುವಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಒಂದು ಸಂಸ್ಥೆಯ ಸಂಘರ್ಷಣಾ ಪ್ರಕ್ರಿಯೆಯ ವಿವಿಧ ಹಂತಗಳನ್ನು ವಿವರಿಸಿ. ಸಂಘರ್ಷಣಾ ನಿರ್ವಹಣೆ ಕಾರ್ಯ ತಂತ್ರಗಳು ನಿರ್ವಹಣಾ ವ್ಯವಸ್ಥೆಯ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಚರ್ಚಿಸಿ.

**19.** ಫ್ರೆಡ್ ಫಿಡ್ಲರ್ ಮತ್ತು ಹರ್ಸೆಯವರು ರೂಪಿಸಿದ ನಾಯಕತ್ವದ ಅವಲಂಬಕ ಮಾದರಿ (contingency model) ಕುರಿತು ಚರ್ಚಿಸಿ ಮತ್ತು ಬ್ಲಾಂಚಾರ್ಡ್‌ನ ಸನ್ನಿವೇಶಾತ್ಮಕ ನಾಯಕತ್ವ ಸಿದ್ಧಾಂತವನ್ನು ನಿರೂಪಿಸಿ.

**20.** ಬದಲಾವಣೆ ಪ್ರತಿರೋಧದ ಮೂಲಗಳು ಯಾವುವು ? ಬದಲಾವಣೆ ಪ್ರತಿರೋಧವನ್ನು ನಿಭಾಯಿಸಲು ಬದಲಾವಣೆ ಅಭಿಕರ್ತರು (Agents) ಬಳಸುವ ವಿವಿಧ ತಂತ್ರಗಳನ್ನು ವಿವರಿಸಿ.

**21.** ಭಾರತದ ಕೈಗಾರಿಕೆಗಳ ಆಡಳಿತ ನಿರ್ವಹಣೆಯಲ್ಲಿ ಕಾರ್ಮಿಕರು ಭಾಗಿಯಾಗುವಂತೆ ಮಾಡಲು ರೂಪಿಸಲಾದ ವಿವಿಧ ಯೋಜನೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಬರೆಯಿರಿ. ಭಾರತದ ಸಂದರ್ಭದಲ್ಲಿ ಈ ಯೋಜನೆಗಳು ವಿಫಲವಾಗುವುದಕ್ಕೆ ಕಾರಣವಾದ ಮುಖ್ಯ ಅಂಶಗಳು ಯಾವುವು ?

**22.** ಕೈಗಾರಿಕಾ ವಿವಾದಗಳನ್ನು ತಡೆಗಟ್ಟಲು ಮತ್ತು ಕೈಗಾರಿಕಾ ಸಾಮರಸ್ಯವನ್ನು ವೃದ್ಧಿಗೊಳಿಸಲು ಅನುಸರಿಸುವ ಪ್ರಮುಖ ಕಾರ್ಯ ವಿಧಾನಗಳ ಬಗ್ಗೆ ತಿಳಿಸಿ. ಕೈಗಾರಿಕಾ ವಿವಾದಗಳನ್ನು ತನಿಖೆಮಾಡಲು ಹಾಗೂ ಇತ್ಯರ್ಥಗೊಳಿಸಲು ಯಾವ ಯಾವ ಪ್ರಾಧಿಕಾರಗಳು ಕೆಲಸಮಾಡುತ್ತಿವೆ ಎಂಬುದನ್ನು ಕುರಿತು ಚರ್ಚಿಸಿ.